

# ಸ್ವಾಮಿ ವಿವೇಕಾನಂದರು ನಿರೂಪಿಸಿದ ನೀತಿಕಥೆಗಳು



ಡಾ. ಕೆ. ಅನಂತರಾಮು

## ತಿರುಗುಬಾಣವಾದ ಪಾದ್ರಿಯ ಬೋಧನೆ

ಈ ಪ್ರಪಂಚವು ಸುಖಮಯವೂ ಅಲ್ಲ, ದುಃಖಮಯವೂ ಅಲ್ಲ; ಎರಡರ ಮಿಶ್ರಣವೆಂಬಂತೆ ತೋರುತ್ತದೆ. ನಾವು ಆ ಕಷ್ಟಸುಖಗಳ ಆಳಕ್ಕೆ ಇಳಿದು ಹೋದಾಗ ಅದಕ್ಕೆಲ್ಲ ನಾವೇ ಹೊಣೆಗಾರರೆಂಬುದು ಮನವರಿಕೆಯಾಗುತ್ತದೆ. ಆಗ ನಾವು ಆಶಾವಾದಿಗಳಾಗುತ್ತೇವೆ. ಅಷ್ಟು ಮಾತ್ರವಲ್ಲದೆ ವೇದಾಂತವು ಕೂಡ ಅದಕ್ಕೊಂದು ಪರಿಹಾರವನ್ನು ತೋರಿಸಿಕೊಡುತ್ತದೆ. ಲೋಕದಲ್ಲಿ ದುಃಖವೇ ಇಲ್ಲ, ದೋಷವೇ ಇಲ್ಲ ಎಂದೇನೂ ವೇದಾಂತವು ಅದನ್ನು ಮರೆಮಾಚಲು ಯತ್ನಿಸುವುದಿಲ್ಲ. ಅದು ಪ್ರಪಂಚದಲ್ಲಿ ಕಂಡುದನ್ನು ಕಂಡಂತೆ ಪರೀಕ್ಷಿಸುತ್ತದೆ. ಅದು ಮಗುವಿನ ಬಾಯಿಗೆ ಬಟ್ಟೆ ತುರುಕಿ ತತ್ಕಾಲಕ್ಕೆ ಅದನ್ನು ಸುಮ್ಮನಾಗಿಸುವ, ವ್ಯಕ್ತಿಗಳ ಕಣ್ಣಿಗೆ ಬಟ್ಟೆಕಟ್ಟಿ ಏನೂ ಕಾಣದಂತೆ ಮಾಡುವ ದುಸ್ಸಾಹಸಕ್ಕೆ ಕೈ ಹಾಕುವುದಿಲ್ಲ.

ಯಾವುದೋ ಒಂದು ಕುಟುಂಬದಲ್ಲಿ ಮನೆಯ ಯಜಮಾನನು ಅಕಾಲ ಮರಣಕ್ಕೆ ತುತ್ತಾದನು. ಅಲ್ಲಿ ನಾಲ್ಕಾರು ಮಕ್ಕಳಿದ್ದರು. ಎಲ್ಲರಿಗಿಂತ ಹಿರಿಯವನು ಇನ್ನೂ ಯುವಕ, ಕಾಲೇಜಿನಲ್ಲಿ ಓದುತ್ತಿದ್ದನು. ಅವನಿಗೆ ತಂದೆ ಸಂಪಾದಿಸಿಟ್ಟ ಆಸ್ತಿಯೇನೂ ಇರಲಿಲ್ಲ. ಈಗ ತಾಯಿಯ ರಕ್ಷಣೆ, ತಮ್ಮಂದಿರ ಪೋಷಣೆ ಮುಂತಾದ ಮನೆಯ ಜವಾಬ್ದಾರಿ ಸಂಪೂರ್ಣವಾಗಿ ಆ ಯುವಕನ ಮೇಲೆಯೇ ಬಿದ್ದಿತು. ಅವನ ತಂದೆಯ ಬಂಧುಗಳಾಗಲಿ, ಸ್ನೇಹಿತರಾಗಲಿ ಯಾರೂ ಸಹಾಯಕ್ಕೆ ಬರಲಿಲ್ಲ. 'ಆರಿಗಾರೂ ಇಲ್ಲ, ಕೆಟ್ಟವಂಗೆ ಕೆಳೆಯಿಲ್ಲ, ಜಗದ ನಂಟ ನೀನೇ ಅಯ್ಯ ಕೂಡಲಸಂಗಮದೇವ' ಎನ್ನುತ್ತಾರಲ್ಲ, ಹಾಗಾಯಿತು ಆ ಯುವಕನ ಪರಿಸ್ಥಿತಿ. ಆಗ ಯುವಕನು ತನಗೆ ಪರಿಚಿತನಾಗಿದ್ದ ಒಬ್ಬ ಪಾದ್ರಿಯ ಬಳಿಗೆ ಹೋದನು. ಅವನು ಗೃಹಸ್ಥನಾಗಿದ್ದನು. ಕೆಲವು ಕ್ರೈಸ್ತ ಪಂಗಡಗಳಲ್ಲಿ ಮದುವೆಯಾದವರು ಪಾದ್ರಿಯಾಗಲು ಏನೂ ಅಡ್ಡಿಯಿಲ್ಲ. ಯುವಕನು ಆ ಪಾದ್ರಿಯ ಬಳಿ ಅನಿರೀಕ್ಷಿತವಾಗಿ ತನಗೆ ಎರಗಿದ ಕಷ್ಟಗಳನ್ನೆಲ್ಲ ಹೇಳಿಕೊಂಡನು. ಅವನಿಂದ ತತ್ಕಾಲಕ್ಕೆ ಏನಾದರೂ ಸಹಾಯ ಒದಗಬಹುದೇನೋ ಎಂದು ಆ ಯುವಕನು ಆಸೆಯಿಟ್ಟುಕೊಂಡಿದ್ದನು. ಆದರೆ ಪಾದ್ರಿಯು ತನ್ನದೇ ಆದ ಶೈಲಿಯಲ್ಲಿ ಉಪದೇಶ ಮಾಡಿದನೇ ಹೊರತು ಸಹಾಯಹಸ್ತವನ್ನೇನೂ ಚಾಚಲಿಲ್ಲ. "ನಿನ್ನ ಮನೆಯ ಪರಿಸ್ಥಿತಿ ಸದ್ಯಕ್ಕೆ ದುಃಖವೆಂದು ತೋರುತ್ತಿದ್ದರೂ ಅದೆಲ್ಲ ನಿನ್ನ ಒಳ್ಳೆಯದಕ್ಕೆಂದೇ ತಿಳಿದುಕೋ. ಆ ದುಃಖದ ಹಿಂದೆ ಒಳ್ಳೆಯದೇ ಇದೆ. ದೇವರು ಮಾಡುವುದೇ ಹಾಗೆ" ಎಂದು ಬೋಧಿಸಿದನು. ಅದು ಗಾಯದ ಮೇಲೆ ಬರೆಯೆಳೆದಂತಾಯಿತೇ ಹೊರತು ಆ ಗಾಯಕ್ಕೆ ಕೈಲಾದ ಉಪಚಾರ ಮಾಡುವ ಉಪಕ್ರಮವಾಗಲಿಲ್ಲ. ಅದು ಗಾಯದ ಮೇಲೆ ಚಿನ್ನದ ರೇಕುಗಳನಿಟ್ಟು ಮುಚ್ಚಿಬಿಡುವ ಕಾರ್ಯದಂತೆ ಆಯಿತು. ಮನಸ್ಸಿನಲ್ಲಿ ದಯೆಯಿಲ್ಲದವನ ಕಣ್ಣು ಕಣ್ಣಲ್ಲ, ಅದು ಹುಣ್ಣಿಗೆ ಸಮ. ಯುವಕನು ನಿರಾಶನಾಗಿ ಹೊರಟುಹೋದನು. ಲೋಕವು ಯಾರನ್ನು ತಾನೇ ನೆಚ್ಚಿಕೊಂಡು ನಡೆಯುತ್ತದೆ ! ಯುವಕನು ಹೇಗೋ ಬದುಕಿನ ಬಂಡಿಯನ್ನು ಎಳೆಯುತ್ತಿದ್ದನು.

ಹೀಗೆಯೇ ಆರು ತಿಂಗಳು ಕಳೆಯಿತು. ಪಾದ್ರಿಗೊಂದು ಗಂಡು ಮಗು ಹುಟ್ಟಿತು. ಅದಕ್ಕಾಗಿ ಅವನೊಂದು ಸಂತೋಷಕೂಟವನ್ನು ಏರ್ಪಡಿಸಿಕೊಂಡು, ತನಗೆ ಬೇಕಾದವರನ್ನೆಲ್ಲಾ ಆಹ್ವಾನಿಸಿದನು. ಆ ಸಮಾರಂಭಕ್ಕೆ ಪಾದ್ರಿಯು ಈ ಯುವಕನನ್ನೂ ಬರಮಾಡಿಕೊಂಡನು. ಆ ಹೊತ್ತಿನಲ್ಲಿ ಪಾದ್ರಿಯು, "ದೇವರು ಕೃಪಾಳುವಾಗಿದ್ದಾನೆ, ನನಗೊಂದು ಮುದ್ದಾದ ಮಗುವನ್ನು ದಯಪಾಲಿಸಿದ್ದಾನೆ. ಅದರಿಂದ ನನಗೆ ಬಹಳ ಸಂತೋಷವಾಗಿದೆ. ಅದಕ್ಕಾಗಿ ಆ ದೇವರಿಗೆ ನನ್ನ ಕೃತಜ್ಞತೆಗಳನ್ನು ಸಮರ್ಪಿಸುತ್ತಿದ್ದೇನೆ... ಈ ಸಮಾರಂಭಕ್ಕೆ ಆಗಮಿಸಿದ ನಿಮಗೂ ಧನ್ಯವಾದಗಳು" ಎಂದು ಪುಟ್ಟದೊಂದು ಭಾಷಣ ಮಾಡಿದನು.

ಆಗ ಯುವಕನು ಎದ್ದುನಿಂತು, "ಅಯ್ಯಾ ಪಾದ್ರಿಗಳೇ, ನಿಮ್ಮ ಮನೆಯಲ್ಲಿ ಈಗ ನಡೆದಿರುವ ಘಟನೆ ಸುಖಕರವಾದುದ್ದೆಂದು ಹೇಗೆ ಹೇಳುತ್ತೀರಿ? ಇದು ದುಃಖಕರವೇ ಅಲ್ಲವೇ" ಎಂದು ಪ್ರಶ್ನಿಸಿದನು. ಆ ಮಾತು ಕೇಳಿ ಪಾದ್ರಿಯು ಅವಕ್ಕಾದನು. ಸ್ವಲ್ಪ ಸಾವರಿಸಿಕೊಂಡು, "ಹೇಗೆ ದು:ಖಕರ?" ಎಂದು ಕೇಳಿದನು. "ನಾನು ಈ ಮೊದಲು ನಿಮ್ಮಲ್ಲಿಗೆ ಬಂದು ನಮ್ಮ ತಂದೆಯ ಮರಣದ ಸಂಕಟವನ್ನೆಲ್ಲ ತೋಡಿಕೊಂಡಾಗ, 'ಹೊರಗಿನ ತೋರಿಕೆಗೆ ಮಾತ್ರ ಈ ಘಟನೆ ದುಃಖವೆಂಬಂತೆ ಭಾಸವಾಗುತ್ತಿದೆ. ಆದರೆ ಸತ್ಯವಾಗಿ ಅದರ ಹಿಂದೆ ಸುಖವೇ ಇದೆ' ಎಂಬ ಅರ್ಥದ ಮಾತು ಹೇಳಿದಿರಿ. ಈಗ ನಿಮ್ಮ ಮನೆಯಲ್ಲಿ ಗಂಡುಮಗು ಹುಟ್ಟಿರುವುದು ಕೂಡ ಹೊರಗಿನ ತೋರಿಕೆಗೆ ಮಾತ್ರ ಸುಖ, ಆದರೆ ಸತ್ಯವಾಗಿ ಅದರ ಹಿಂದೆ ದುಃಖವೇ ಇದೆ ಎಂದು ಹೇಳಬಹುದಲ್ಲವೇ" ಎಂದು ವಿವರಿಸಿದನು. ತನ್ನ ಬೋಧನೆಯು ತನಗೇ ತಿರುಗುಬಾಣವಾದುದಕ್ಕೆ ಪಾದ್ರಿಯ ಮುಖ ಚಿಕ್ಕದಾಯಿತು.

ಸ್ವಾಮಿ ವಿವೇಕಾನಂದರು ಈ ಕಥೆಯನ್ನು ಮುಂದಿಟ್ಟುಕೊಂಡು ಪಾದ್ರಿಯ ದೃಷ್ಟಿಯಿಂದ ಮತ್ತು ಯುವಕನ ದೃಷ್ಟಿಯಿಂದ ಎಂಬಂತೆ – ಎರಡು ಆಯಾಮಗಳಲ್ಲಿ ನೀತಿಬೋಧೆ ಮಾಡಿದ್ದಾರೆ. "ನೀವು ಒಳ್ಳೆಯವರಾಗಿ. ಆದರೆ ಗಾಯವನ್ನು ಚಿನ್ನದ ರೇಕುಗಳಿಂದ ಮುಚ್ಚುವ ಹುಚ್ಚುತನದ ಕಾರ್ಯವನ್ನು ಮಾಡಬೇಡಿ. ದುಃಖಿಸುವವರ ವಿಷಯದಲ್ಲಿ ದಯಾವಂತರಾಗಿ" ಎಂದು ಪಾದ್ರಿಯ ಸ್ವಭಾವದ ಮನುಜರಿಗೆ ಉಪದೇಶಿಸಿದ್ದಾರೆ. ಯುವಕನನ್ನು ಕೇಂದ್ರವಾಗಿಟ್ಟುಕೊಂಡು ವೇದಾಂತದ ಬಲದಿಂದ ಕಷ್ಟಗಳನ್ನು ಎದುರಿಸುವುದು ಹೇಗೆ ಎಂಬುದನ್ನೂ ತಿಳಿಯಹೇಳಿದ್ದಾರೆ. ಈ ಜಗತ್ತು ಒಳ್ಳೆಯದು ಮತ್ತು ಕೆಟ್ಟದ್ದು ಎಂಬ ಎರಡೂ ಸಂಗತಿಗಳ ಮಿಶ್ರಣವಾಗಿದೆ. ಈ ಒಳ್ಳೆಯದು ಮತ್ತು ಈ ಕೆಟ್ಟದ್ದರ ಹಿಂದೆ ಆತ್ಮರೆನಿಸಿದ ನಾವೇ ಇದ್ದೇವೆ. ನಾವು ಬಂಧನಕ್ಕೆ ಒಳಗಾದವರಲ್ಲ, ಪ್ರಕೃತಿಯ ದಾಸರೂ ಅಲ್ಲ. ನಾವು ಸೂರ್ಯಚಂದ್ರನಕ್ಷತ್ರಾದಿಗಳನ್ನೆಲ್ಲ ಮೀರಿದವರಾಗಿದ್ದೇವೆ ಎಂದು ಭಾವಿಸಿದರೆ, ಒಳ್ಳೆಯದು ಮತ್ತು ಕೆಟ್ಟದ್ದು ಎಂಬ ದ್ವಂದ್ವವನ್ನು ನಿಗ್ರಹಿಸಲು ಸಮರ್ಥರಾಗುತ್ತೇವೆ. ಆಗ ನಮಗೆ, "ಒಳ್ಳೆಯದು ಎಷ್ಟು ಆಪ್ಯಾಯಮಾನವಾಗಿದೆ, ಕೆಟ್ಟದ್ದು ಸಹ ಎಷ್ಟು ಅದ್ಭುತವಾಗಿದೆ" ಎಂದು ಹೇಳುವಷ್ಟು ಧೈರ್ಯ ಉಕ್ಕಿಬರುತ್ತದೆ. ಈ ಬದುಕು ಕಠಿಣವೆಂಬುದು ಸತ್ಯ. ಆದರೆ ಆ ಕಠಿಣತೆಯ ಮೂಲಕವೇ ಧೀರರಾಗಿ ಸುಖದ ಮಾರ್ಗವನ್ನು ಕಂಡುಕೊಳ್ಳಬೇಕಾಗಿದೆ.